<u>ದಿನಾಂಕಃ **21-06-2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು**.**</u>

<u>ಪಾಟೀ ಸವಾಲುಃ ಪ್ರತಿವಾದಿ **2** ರಿಂದ **4** ರ ಪರ ಶ್ರೀ ಹೆಚ್ ಎನ್ ವಿ ವಕೀಲರಿಂದಃ</u>

ನಾನು ಈ ದಾವೆಯನ್ನು ನಮ್ಮ ತಂದೆಯ ಭಾಗಕ್ಕೆ ಆಸ್ತಿಯಲ್ಲಿ ಪಾಲು ಬೇಕು ಎಂದು ಈ ದಾವೆ ಹೂಡಿರುತ್ತೇನೆ. ನಾನು ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಮೂಲ ದಾವೆ ಸಂಖ್ಯೆ 12/2022 ಕೊಪ್ಪ ಸಿವಿಲ್ ನ್ಯಾಯಾಲಯಲ್ಲಿ ಹೂಡಿದ ಬಗ್ಗೆ ಮಾಹಿತಿ ಇತ್ತಾ ಎಂದರೆ ಸಾಕ್ಷಿ ನಮ್ಮ ತಂದೆ ಸದರಿ ದಾವೆಯ ಬಗ್ಗೆ ತಾವು ಸಹಿ ಮಾಡಿದ ನಂತರ ನಮಗೆ ಹೇಳಿರುತ್ತಾರೆ ಎಂದು ಉತ್ತರಿಸುತ್ತಾರೆ. ನಂತರ ನಾನು ಸದರಿ ದಾವೆಯ ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ. ಸಾಕ್ಷಿ ಮುಂದುವರೆದ ಪಹಣಿ ಬಂದ ನಂತರ ನನಗೆ ಗೊತ್ತಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಪಹಣಿ ಬಂದ ನಂತರ ನಾನು ಸಿವಿಲ್ ನ್ಯಾಯಾಲಯದಲ್ಲಿ ಸದರಿ ದಾವೆಗೆ ಸಂಬಂಧಿಸಿದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ನಾನು ಸದರಿ ದಾಖಲೆಗಳ ಬಗ್ಗೆ ನಮ್ಮ ವಕೀಲರ ಬಳಿ ವಿಚಾರಣೆ ಮಾಡಿರುತ್ತೇನೆ. ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಾನು ನಮ್ಮ ವಕೀಲರ ಬಳಿ ದಾಖಲೆಗಳನ್ನು ತೆಗೆದುಕೊಂಡು ಹೋಗಿ ಪರಿಶೀಲನೆ ಮಾಡಿಸಿರುತ್ತೇನೆ.

2. ಮೂಲ ದಾವೆ ಸಂಖ್ಯೆ 12/2022 ರ ದಾವೆ ಇತ್ಯರ್ಥ ಆದ ನಂತರ ಪ್ರತಿವಾದಿ 2 ರಿಂದ 4 ರವರು ಒಟ್ಟು ಕುಟುಂಬದ ಸದಸ್ಯರು ಇರುವುದಿಲ್ಲ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ 12/2022 ರಲ್ಲಿ ನಮ್ಮ ತಂದೆಯ ಪಾಲಿಗೆ ಬಂದಂತಹ ಆಸ್ತಿಗಳಿಗೆ ವಿಭಾಗ ಕೋರಿ ನಾನು ಈ ದಾವೆಯನ್ನು ಹೂಡಿರುತ್ತೇನೆ. ದಾವಾ ಸ್ವತ್ತು 1 ಮತ್ತು 2 ಮೂಲ ದಾವೆ ಸಂಖ್ಯೆ 12/2022 ರಲ್ಲಿ ನಿಮ್ಮ ತಂದೆಯ ಪಾಲಿಗೆ ಬಂದಿರಲಿಲ್ಲ ಎಂದರೆ ಸಾಕ್ಷಿ ಪಶ್ಚಿಮ ಭಾಗದ ಅರ್ಧ ಮನೆ ನಮ್ಮ ತಂದೆಯ ಪಾಲಿಗೆ ಬಂದಿತ್ತು ಎಂದು ಉತ್ತರಿಸುತ್ತಾರೆ. ಸದರಿ ದಾವೆಯ ಪ್ರಕಾರ ದಾವಾ ಸ್ವತ್ತು 1 ಮತ್ತು 2 ನಮ್ಮ ತಂದೆಯ ಪಾಲಿಗೆ ಬರದೇ ಇದ್ದರು, ಬಂದಿರುತ್ತದೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು 1 ಮತ್ತು 2 ರ ಮೇಲೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ

ಸ್ವತ್ತು 2 ರಲ್ಲಿರುವ ಮನೆಯನ್ನು ಖರೀದಿ ಮಾಡಲು ನಮ್ಮ ತಾಯಿ ದಾವೂದ್ ಸಾಹೇಬ್ ಇವರಿಗೆ ಹಣ ಕೊಟ್ಟಿರುತ್ತಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮ ತಾಯಿ ಅಂಗನವಾಡಿಯಲ್ಲಿ 38 ವರ್ಷಗಳಿಂದ ಶಿಕ್ಷಕಿ ಎಂದು ಕೆಲಸ ಮಾಡುತ್ತಾರೆ. ಸದರಿ ಕೆಲಸ ಹೊರತುಪಡಿಸಿ ನಮ್ಮ ತಾಯಿ ಬೇರೆ ಯಾವುದೇ ಕೆಲಸ ಮಾಡುತ್ತಿರಲಿಲ್ಲ. ನಮ್ಮ ತಾಯಿ ಅಂಗನವಾಡಿ ಶಿಕ್ಷಕಿ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ನಾನು ಈ ದಾವೆಯಲ್ಲಿ ಅನಗತ್ಯ ವಿಚಾರಗಳನ್ನು ವಾದ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 139 ರಲ್ಲಿ ಇರುವ ವಸಂತರವರ ಸ್ವಂತ ಖರೀದಿಸಿದ ಮನೆಯಲ್ಲಿ ನಾವು ಅನುಮತಿಯ ಮೇರೆಗೆ ವಾಸ ಇದ್ದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಾಯಿ ರೂ.75,000/- ಹಾಗೂ ವಸಂತ ಇವರು ರೂ. 1,75,000/- ಖರೀದಿ ಮಾಡಿದ್ದರು ಎಂದು ಉತ್ತರಿಸುತ್ತಾರೆ. ಸದರಿ ಮನೆಯನ್ನು ಖರೀದಿ ಮಾಡಲು ನಮ್ಮ ತಾಯಿ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಹಾಗೂ ಅದು ವಸಂತ ಇವರ ಸ್ವಯಾರ್ಜಿತ ಆಸ್ತಿ ಇರುತ್ತದೆ ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಕೇಳಿದ ಪರಿಹಾರಗಳು ದಾವಾ ಸ್ವತ್ತು 1 ಮತ್ತು 2 ಕ್ಕೆ ಅನ್ವಯಿಸುದಿಲ್ಲ ಎಂದರೆ ಸರಿಯಲ್ಲ. ಮೂಲ ದಾವೆ ಸಂಖ್ಯೆ 12/2022 ರಲ್ಲಿ ಆದ ಆದೇಶವನ್ನು ನಾನು ಈ ದಾವೆಯಲ್ಲಿ ಪ್ರಶ್ನೆ ಮಾಡಿರುತ್ತೇನೆ.

4. ನಮ್ಮ ತಂದೆ ಮೂಲ ದಾವೆ ಸಂಖ್ಯೆ 12/2022 ರ ಆದೇಶವನ್ನು ನನ್ನ ಕಡೆಯಿಂದ ಒತ್ತಾಯ ಪೂರ್ವಕವಾಗಿ ಸಹಿ ಪಡೆದುಕೊಂಡಿರುತ್ತಾರೆ ಎಂದು ಪ್ರಶ್ನಿಸಿ ಯಾವುದೇ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಾನು ಈ ದಾವೆಯಲ್ಲಿ ಪ್ರತಿವಾದಿ 2 ರಿಂದ 4 ರವರ ಮೇಲೆ ಅನಗತ್ಯ ಆರೋಪಗಳನ್ನು ಮಾಡಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನಮ್ಮ ತಂದೆ ಸಲ್ಲಿಸಿದ ಪ್ರತಿವಾದ ಪತ್ರವನ್ನು ನಾನು ನೋಡಿರುತ್ತೇನೆ. ನಮ್ಮ ತಂದೆ ತಮ್ಮ ಪ್ರತಿವಾದ ಪತ್ರದಲ್ಲಿ ರಾಜಿ ಅರ್ಜಿ ಸಲ್ಲಿಸುವ ಕಾಲಕ್ಕೆ ತಮ್ಮ ಮೇಲೆ ಒತ್ತಡ ಪ್ರಭಾವ ಬೀರಿ ಸಹಿ ಪಡೆದಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿ ನಮ್ಮ ತಂದೆ ಏನಕ್ಕೆ ಸಹಿ ಮಾಡಿರುತ್ತಾರೆ ಎಂದು

ಗೊತ್ತಿರುವುದಿಲ್ಲ ಎಂದು ಹೇಳಿದ್ದರು ಎಂದು ಉತ್ತರಿಸುತ್ತಾರೆ. ರಾಜಿ ಅರ್ಜಿಯ ಪ್ರಕಾರ ದಾವಾ ಸ್ವತ್ತು 1 ಮತ್ತು 2, ಎರಡನೇ ಪ್ರತಿವಾದಿಗೆ ಸೇರಿದ್ದು ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದ ಅನುಕಂಪ ಪಡೆಯುವ ಉದ್ದೇಶದಿಂದ ಸುಳ್ಳು ವಿಚಾರಗಳನ್ನು ವಾದ ಪತ್ರದಲ್ಲಿ ನಮೂದಿಸಿ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಪ್ರತಿವಾದಿ 1 ರ ಪರ ವಕೀಲರು ಪ್ರತಿವಾದಿ 2 ರಿಂದ 4 ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಮರು ವಿಚಾರಣೆಃ ಇಲ್ಲಃಃ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

Sd/-xxx
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ,
ಸಂಚಾರಿ ನ್ಯಾಯಾಲಯ, ಕೊಪ್ಪ.

ಸಾಕ್ಷಿದಾರರ ಸಹಿಃ